# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ.ಸುಜಾ ಕುಶಾಲಪ್ಪ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.

**ವಿಷಯ:** ದಿನಾಂಕ: 13.07.2024 ರಂದು ಕೊಡಗು ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಲ್ಲಿ ಮೀಸಲು ಅರಣ್ಯ ಪ್ರದೇಶಕ್ಕೆ 67 ಗ್ರಾಮಗಳ ನೂರಾರು ಸರ್ವೆ ನಂಬರ್‌ಗಳ ಗುರುತು ಎಂಬ ಶೀರ್ಷಿಕೆಯಡಿಯಲ್ಲಿ ವರದಿಯಾಗಿರುವಂತೆ ಮೀಸಲು ಅರಣ್ಯ ಪ್ರದೇಶ ಘೋಷಣೆ ಕುರಿತು ಕೊಡಗು ಜಿಲ್ಲೆಯ 67 ಗ್ರಾಮಗಳ ನೂರಾರು ಸರ್ವೆ ನಂಬರ್‌ಗಳ ಜಾಗಗಳನ್ನು ಗುರುತಿಸಲಾಗಿದೆ.

ಈಗಾಗಲೇ ಜಿಲ್ಲೆಯಲ್ಲಿ ಹಲವಷ್ಟು ಗ್ರಾಮಗಳ ಸರ್ವೆ ನಂಬರ್‌ಗಳಲ್ಲಿರುವ ಸಾವಿರಾರು ಹೆಕ್ಟೇರ್ ಭೂಮಿಯ ಸ್ಥಿತಿಗತಿಯ ಮಾಹಿತಿ ನೀಡುವಂತೆ ಜಿಲ್ಲೆಯ ವಿವಿಧ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮೈಸೂರು ವಿಭಾಗದ ಅರಣ್ಯ ವ್ಯವಸ್ಥಾಪನಾಧಿಕಾರಿ ಇವರು ಸೂಚನೆ ನೀಡಿರುತ್ತಾರೆ. ಇದರ ಪ್ರಕಟಣೆಗಳು ಪತ್ರಿಕೆ ಹಾಗೂ ಆಯಾ ಪಂಚಾಯಿತಿ ನೋಟಿಸ್ ಬೋರ್ಡ್‌ಗಳಲ್ಲಿಯೂ ಪ್ರಕಟಿಸಲಾಗುತ್ತಿದೆ. ಸದರಿ ಆದೇಶದ ಅನ್ವಯ ಸಾವಿರಾರು ಹೆಕ್ಟೇರ್ ಪ್ರದೇಶಗಳು ಮೀಸಲು ಅರಣ್ಯವಾಗಿ ಬದಲಾಗುವ ಆತಂಕ ಜಿಲ್ಲೆಯಲ್ಲಿ ಸೃಷ್ಟಿಯಾಗಿದೆ.

ಈ ಕ್ರಮಕ್ಕೆ ಜಿಲ್ಲೆಯಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ವಿವಿಧ ಕಡೆಗಳಲ್ಲಿ ಮೀಸಲು ಅರಣ್ಯ ಪ್ರದೇಶ ಮಾಡುವುದರಿಂದ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀಳುವ ಸಾಧ್ಯತೆ ಇದೆ. ಕ್ರಮೇಣ ಆ ಭಾಗಗಳಲ್ಲಿ ಬದುಕು ನಡೆಸುವುದೇ ಅಪರಾಧ ಎಂಬಂತಾಗಬಹುದು ಎಂಬ ಭಯವನ್ನು ಜನತೆ ವ್ಯಕ್ತಪಡಿಸುತ್ತಿದ್ದಾರೆ. ಕೊಡಗಿನಲ್ಲಿ ವನ್ಯಜೀವಿ ಮಾನವ ಸಂಘರ್ಷ ಮಿತಿಮೀರುತ್ತಿದೆ. ಮೊದಲು ಇದನ್ನು ಸರಿಪಡಿಸಬೇಕಾದ ರಾಜ್ಯ ಸರ್ಕಾರ ಕೊಡಗಿನ ಜನರಲ್ಲಿ ಆತಂಕ ಮೂಡಿಸುವ ಕೆಲಸಕ್ಕೆ ಕೈ ಹಾಕುತ್ತಿದೆ.

ಮೀಸಲು ಅರಣ್ಯ ಮಾಡಬೇಕೆಂಬ ಉದ್ದೇಶ ಅಪ್ರಸ್ತುತ ಕೂಡಲೇ ಮೀಸಲು ಅರಣ್ಯ ಮಾಡುವ ಪ್ರಸ್ತಾವನೆಯನ್ನು ಹಿಂಪಡೆಯುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

*****

**ಉತ್ತರ:** ಕರ್ನಾಟಕ ಅರಣ್ಯ ಕಾಯ್ದೆಯಲ್ಲಿ ಉಪ ಬಂಧಿಸಿರುವಂತೆ ಒಂದು ಪ್ರದೇಶವನ್ನು ಮೀಸಲು ಅರಣ್ಯವೆಂದು ಘೋಷಿಸಲು ಈ ಕೆಳಕಂಡ ಪ್ರಕ್ರಿಯೆಗಳನ್ನು ಅನುಸರಿಸಲಾಗುತ್ತದೆ.

1. ಸರ್ಕಾರವು ಯಾವುದೇ ಭೂಮಿಯನ್ನು ಮೀಸಲು ಅರಣ್ಯವನ್ನಾಗಿ ನಿರ್ಮಾಣ ಮಾಡಬೇಕೆಂದಾಗ ಅಂತಹ ಭೂಮಿಯನ್ನು ಒಂದು ಮೀಸಲು ಅರಣ್ಯವಾಗಿ ರಚಿಸಬೇಕೆಂದು ತೀರ್ಮಾನಿಸಿರುವುದಾಗಿ ಸೆಕ್ಷನ್-4ರಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಬೇಕಾಗಿರುತ್ತದೆ.

2. ಮೀಸಲು ಅರಣ್ಯವನ್ನಾಗಿ ಅಧಿಸೂಚಿಸಬೇಕಿರುವ ಪ್ರದೇಶದಲ್ಲಿ ಅಸ್ತಿತ್ವದಲ್ಲಿರಬಹುದಾದ ಯಾವುದೇ ಹಕ್ಕುಗಳನ್ನು ನಿರ್ಧರಿಸಲು ಅಥವಾ ಯಾವುದೇ ವ್ಯಕ್ತಿಯ ಪರವಾಗಿ ಹಕ್ಕು ಪಡೆಯಲು ಅರಣ್ಯ ವ್ಯವಸ್ಥಾಪನಾಧಿಕಾರಿಯನ್ನು ಸರ್ಕಾರವು ನೇಮಿಸಿರುತ್ತದೆ.

3. ಸೆಕ್ಷನ್-5ರಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಯು ಉದ್ಘೋಷಣೆ ಹೊರಡಿಸುವ ಮೂಲಕ ಪ್ರಸ್ತಾಪಿತ ಪ್ರದೇಶದ ಮೇಲೆ ಯಾವುದೇ ವ್ಯಕ್ತಿಗೆ ತನ್ನ ಹಕ್ಕುಗಳನ್ನು ಪ್ರತಿಪಾದಿಸಲು ಅವಕಾಶ ಕಲ್ಪಿಸಲಾಗುತ್ತದೆ.

4. ಅರಣ್ಯ ವ್ಯವಸ್ಥಾನಪಾಧಿಕಾರಿಯು ಕರ್ನಾಟಕ ಅರಣ್ಯ ಕಾಯ್ದೆ-1963ರ ಸೆಕ್ಷನ್-6 ರಿಂದ ಸೆಕ್ಷನ್-16ರಡಿ ಹಾಗೂ ಕರ್ನಾಟಕ ಅರಣ್ಯ ನಿಯಮಾವಳಿ-1969ರ ನಿಯಮ-3 ರಿಂದ ನಿಯಮ-16 ರಲ್ಲಿ ವಿವರಿಸಿದ ಕಾರ್ಯವಿಧಾನದಂತೆ ಅರಣ್ಯ ವ್ಯವಸ್ಥಾಪನಾ ಕಾರ್ಯವನ್ನು ಜರುಗಿಸಿ ಜನರ ಹಕ್ಕುಗಳ ಬಗ್ಗೆ ಪರಿಶೀಲಿಸಿ ಇತ್ಯರ್ಥಗೊಳಿಸಬೇಕಾಗಿರುತ್ತದೆ.

5. ಮೇಲಿನ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ, ಅರಣ್ಯ ವ್ಯವಸ್ಥಾಪನಾಧಿಕಾರಿಯು ಕರ್ನಾಟಕ ಅರಣ್ಯ ನಿಯಮಾವಳಿ-1969ರ ನಿಯಮ-16ರಲ್ಲಿ ನಿಯಮಿಸಿರುವಂತೆ ಕಾರ್ಯವ್ಯಾಪ್ತಿಯ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮೀಸಲು ಅರಣ್ಯದ ಅಂತಿಮ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.

6. ಹೀಗೆ ಸ್ವೀಕರಿಸಲ್ಪಟ್ಟ ಮೀಸಲು ಅರಣ್ಯದ ಪ್ರಸ್ತಾವನೆಯಂತೆ ಸರ್ಕಾರವು ಸೆಕ್ಷನ್-17ರ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ ಪ್ರಸ್ತಾಪಿತ ಪ್ರದೇಶವನ್ನು "ಮೀಸಲು ಅರಣ್ಯ" ಎಂದು ಘೋಷಿಸುತ್ತದೆ.

7. ಕೊಡಗು ಜಿಲ್ಲೆಯಲ್ಲಿ 1991 ರಿಂದ 1995ನೇ ಇಸವಿಯವರೆಗೆ 74 ಸಂಖ್ಯೆ ಸೆಕ್ಷನ್-4 ಅಧಿಸೂಚನೆ ಹೊರಡಿಸಲಾಗಿರುತ್ತದೆ. ಇದು 4973.00 ಹೆಕ್ಟೇರ್ ಪ್ರದೇಶಕ್ಕೆ ಸಂಬಂಧಿಸಿದ್ದಾಗಿರುತ್ತದೆ. (ವಿವರದ ತಖ್ತೆ ಒದಗಿಸಿದೆ)

8. ಮಾರ್ಚ್-2024 ರಿಂದ ಜುಲೈ-2024ರ ಅವಧಿಯಲ್ಲಿ 33 ಸಂಖ್ಯೆಯ ಸೆಕ್ಷನ್-4ರಡಿ ಅಧಿಸೂಚಿಸಲ್ಪಟ್ಟ ಪ್ರದೇಶಕ್ಕೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿಯ ಅರಣ್ಯ ವ್ಯವಸ್ಥಾಪನಾಧಿಕಾರಿ ರವರು ಮೀಸಲು ಅರಣ್ಯವೆಂದು ಘೋಷಿಸಲು ಉದ್ದೇಶಿಸಿರುವ ಭೂಮಿಯಲ್ಲಿ ಯಾವುದಾದರೂ ಕ್ಲೇಮ್/ ಹಕ್ಕುಗಳನ್ನು ಪ್ರತಿಪಾದಿಸಲು ಸಂಬಂಧಪಟ್ಟ ವ್ಯಕ್ತಿಗಳಿಗೆ ತಿಳಿಸಲು, ಸೆಕ್ಷನ್-5ರಡಿಯಲ್ಲಿ ಉದ್ಘೋಷಣೆಗಳನ್ನು ಹೊರಡಿಸುವ ಮೂಲಕ ಮಾಹಿತಿಯನ್ನು ಸಾರ್ವಜನಿಕ ಪ್ರಕಟಣೆ ಮತ್ತು ಮಾಧ್ಯಮಗಳಲ್ಲಿ ಪ್ರಕಟಿಸಿರುತ್ತಾರೆ.

9. ಪ್ರಸ್ತುತ ಕರ್ನಾಟಕ ಅರಣ್ಯ ಕಾಯ್ದೆ ಹಾಗೂ ನಿಯಮಾವಳಿಗಳಲ್ಲಿ ಉಪಬಂಧಿಸಿರುವಂತೆ ಅರಣ್ಯ ವ್ಯವಸ್ಥಾಪನಾ ಕಾರ್ಯ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಅಪಜೀ 88 ಎಫ್ ಎ ಎಫ್ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಈಶ್ವರ ಬಿ. ಖಂಡ್ರೆ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

## Details Section -4 to Section-5 and Section -5 to Section-17 in Kodagu Circle, Madikeri.

| Sl no | Circle | Division | Range | Notification No/Date | Taluk | Hobli | Village | Sy No | Extent (Ha) |
|---|---|---|---|---|---|---|---|---|---|
| 1 | 2 | 4 | 5 | 6 | 7 | 8 | 9 | 10 | 11 |
| 1 | Madikeri | Madikeri | Kushalnagar | GO No : AHFF-204-FAF-91 Dated : 18-06-1991 | Somwarpet | Kushalnagar | Rasalpura | 49/1 | 11.00 |
| 2 | | | | GO No : AHFF-273-FAF-91 Dated : 14-06-1991 | | Kushalnagar | Kudnamanglore | 23/1. | 18.00 |
| 3 | | | | FEE : 116 FAF 93 Dated : 13-01-1994 | | Kushalnagar | Rangasamudra | 25/1. | 0.48 |
| | | | | | | Total | | | 29.48 |
| 4 | Madikeri | Madikeri | Shanivarasanthe | AHFF-198FAF-91 Dt 22-06-1991/ 12-7-1991 | somawarpet | kodlipet | Nakalagodu | 38/1 | 12.48 |
| 5 | Madikeri | Madikeri | shanivarasanthe | AHFF-199FAF-91 Dated 12-7-1991 | somawarpet | kodlipet | Vadayanapura | 124, 149/16 | 30 |
| 6 | Madikeri | Madikeri | shanivarasanthe | AHFF-263FAF-91 Dated 28-06-91 | somawarpet | Shanivarasanthe | Hosalli | 24/1 | 8.64 |
| 7 | Madikeri | Madikeri | shanivarasanthe | AHFF-58FAF-90 Dated 8-8-1994 | somawarpet | Shanivarasanthe | Shivaralli | 55/4 | 16.56 |
| 8 | Madikeri | Madikeri | shanivarasanthe | AHFF-69FAF-90/14-2-1991 | somawarpet | Shanivarasanthe | Sunti | 1/1, 28/1 | 15.6 |
| 9 | Madikeri | Madikeri | shanivarasanthe | AHFF-68FAF-90/4-8-1994 | somawarpet | Shanivarasanthe | Bhageri | 38/1, 100 | 17.76 |
| 10 | Madikeri | Madikeri | shanivarasanthe | AHFF-62FAF-90/8-8-1994 | somawarpet | Shanivarasanthe | Alur | 5/3, 16/1 | 39.56 |
| | | | | | | Total | | | 140.6 |
| 11 | Kodagu | Madikeri | Madikeri | AHFF-57-FAF-90/ 04-08-1994 | Madikeri | Madikeri | Mutlu | 1/17<br>1/18<br>1/22 | 142.940 |

Details of Section-4 Proposal

| | | | | | | | | | |
|---|---|---|---|---|---|---|---|---|---|
| 12 | Kodagu | Madikeri | Madikeri | AHFF-19-FAF-93/ 23-09-1993 | Madikeri | Madikeri | Monnangeri | 52/1A | 20.480 |
| 13 | Kodagu | Madikeri | Madikeri | AHFF-248-FAF-91/ 27-11-1993 | Madikeri | Madikeri | Galibeedu | 100/2 | 55.200 |
| 14 | Kodagu | Madikeri | Madikeri | AHFF-66-FAF-88/ 08-08-1994 | Madikeri | Madikeri | Mukkodlu | 55 | 109.440 |
| 15 | Kodagu | Madikeri | Madikeri | AHFF-18-FAF-93/ 08-09-1998 | Madikeri | Madikeri | Kalakeri Nidugane | 14/1 | 5.760 |
| 16 | Kodagu | Madikeri | Madikeri | AHFF-247-FAF-91/ 27-11-1993 | Madikeri | Madikeri | Hodduru | 167/1A | 3.840 |
| 17 | Kodagu | Madikeri | Madikeri | AHFF-15-FAF-93/14-09-1993 | Madikeri | Madikeri | Hodduru | 86<br>87<br>93/1 | 4.48 |
| 18 | Kodagu | Madikeri | Madikeri | AHFF-225-FAF-91/ 21-01-1994 | Madikeri | Madikeri | Avandi | 11/5 | 376.16 |
| 19 | Kodagu | Madikeri | Madikeri | AHFF-196-FAF-91/18-06-1991 | Madikeri | Madikeri | Hachinadu | 1/1<br>3/1<br>12/1 | 550.08 |
| 20 | Kodagu | Madikeri | Madikeri | A.H.F.F.-39 FAF 93 Dated: 2/11/93 | Madikeri | Madikeri | Hedduru | 41/1 | 8.35 |
| 21 | Kodagu | Madikeri | Madikeri | F.E.E. 37 F.A.F. 93 Dt: 26/10/93 | Madikeri | Madikeri | Ikola | 16 | 0.52 |
| 22 | Kodagu | Madikeri | Madikeri | A.H.F.F. 38 F.A.F.93 DT 21/11/93 | Madikeri | Madikeri | Ikola | 17 | 1.91 |
| 23 | Kodagu | Madikeri | Madikeri | FEE 43 FAF 93 Dtd 19/3/1994 | Madikeri | Madikeri | Hakathuru | 109/3 | 3.3 |
| | | | | | | Total | | | 1282.46 |

Details of Section-4 Proposal

| | | | | | | | | | |
|---|---|---|---|---|---|---|---|---|---|
| 24 | Kodagu | Madikeri | Bhagamandala | AHFF 149 FAF 91 Dated 06-06-1991 | Madikeri | Bhagamandala | Yavakapadi | 254/1 | 10.00 |
| 25 | Kodagu | Madikeri | Bhagamandala | AHFF 136 FAF 91 Dated 03-06-1991 | Madikeri | Bhagamandala | Yavakapadi | 250/9 | 296.800 |
| 26 | Kodagu | Madikeri | Bhagamandala | AHFF 64 FAF 90 Dated 04-08-1994 | Madikeri | Bhagamandala | Kunjila | 1/5 | 241.00 |
| 27 | Kodagu | Madikeri | Bhagamandala | AHFF 281 FAF 91 Dated 27-06-1991 | Madikeri | Bhagamandala | Thavoor | 1/1 | 47.00 |
| 28 | Kodagu | Madikeri | Bhagamandala | AHFF 246 FAF 91 Dated 24-11-1993 | Madikeri | Bhagamandala | Naladi | 2/1 | 240.00 |
| 29 | Kodagu | Madikeri | Bhagamandala | AHFF 67 FAF 90 Dated 08-08-1994 | Madikeri | Bhagamandala | Thannimani | 10/1 | 111.36 |
| | | | Bhagamandala | | Madikeri | | Cherangala | 2/3 | 33.84 |
| | | | Bhagamandala | | Madikeri | | | 2/14 | 6.72 |
| 30 | Kodagu | Madikeri | Bhagamandala | AHFF 233 FAF 91 Dated 03-6-1991 | Madikeri | Bhagamandala | Bethu | 18/1 18/4, 18/5, 18/6 | 21.850 |
| 31 | Kodagu | Madikeri | Bhagamandala | AHFF 242 FAF 91 Dated 27-11-1993 | Madikeri | Bhagamandala | Thannimani | 10/1 | 108.62 |
| | | | | | | Total | | | 1117.190 |
| 32 | Kodagu | Madikeri | Somwarpet | AHFF-158-FAF-91 dated : 19-01-1994. | Somwarpet | Shanthalli | Shanthalli | 21/2 | 12.480 |
| 33 | Kodagu | Madikeri | Somwarpet | AHFF-197-FAF-91 dated 14-6-1991 | Somwarpet | Somwarpet | Hosabeedu | 7 & 8 | 20.800 |
| 34 | Kodagu | Madikeri | Somwarpet | AHFF-262-FAF-91 dated 05-6-1991 and 21-06-1991 | Somwarpet | Suntikoppa | Shirangalli | 11/9 | 0.064 |
| 35 | Kodagu | Madikeri | Somwarpet | AHFF-262-FAF-91 dated 21-6-1991 | Somwarpet | Suntikoppa | Shirangalli | 13 | 1.92 |

| | | | | | | | | | |
|---|---|---|---|---|---|---|---|---|---|
| 36 | Kodagu | Madikeri | Somwarpet | AHFF-261-FAF-91 dated : 05-06-1991 and 21-06-1991 | Somwarpet | Shanthalli | Kumbargadige | 1/2 | 988.730 |
| 37 | Kodagu | Madikeri | Somwarpet | AHFF-272-FAF-91 dated 19-01-1994 | Somwarpet | Shanthalli | Kumbargadige | 8 | 24.800 |
| 38 | Kodagu | Madikeri | Somwarpet | AHFF-61-FAF-90 dated 05-08-1994 | Somwarpet | Shanthalli | Kumbargadige | 126/2 | 15.040 |
| 39 | Kodagu | Madikeri | Somwarpet | AHFF-184-FAF-91 dated 19-01-1994 | Somwarpet | Shanthalli | Koothi | 735/1 | 114.240 |
| 40 | Kodagu | Madikeri | Somwarpet | FEE-108-FAF-94 dated 15-1-1994 | Somwarpet | Shanthalli | Thalthare Shettalli | 2/1 | 36.35 |
| 41 | Kodagu | Madikeri | Somwarpet | AHFF-63-FAF-90 dated 04-08-1994 | Somwarpet | Somwarpet | Negalli Karkalli | 235. 226/2 | 30 |
| 42 | Kodagu | Madikeri | Somwarpet | AHFF-74-FAF-90 dated 04-08-1994 | Somwarpet | Shanthalli | Haraga | 34/8 | 511.68 |
| 43 | Kodagu | Madikeri | Somwarpet | AHFF-254-FAF-91 dated 20-01-1994 | Somwarpet | Somwarpet | kalkanduru | 55/1. 55/16 | 52.4 |
| 44 | Kodagu | Madikeri | Somwarpet | FEE-132-FAF-93- dated 8-2-1994 | Somwarpet | Shanthalli | Chikkatholuru | 141 | 0.21 |
| 45 | Kodagu | Madikeri | Somwarpet | FEE-112-FAF-93- dated 01-09-1994 | Somwarpet | Shanthalli | Chikkatholuru | 173/1 154/1 | 22.29 |
| 46 | Kodagu | Madikeri | Somwarpet | FEE-133-FAF-93- dated 8-2-1994 | Somwarpet | Shanthalli | Chikkatholuru | 116 | 0.26 |
| 47 | Kodagu | Madikeri | Somwarpet | FEE-113-FAF-93-dated:13-1-1994 | Somwarpet | Shanthalli | Koothi | 380 | 5.95 |
| 48 | Kodagu | Madikeri | Somwarpet | FEE-134-FAF-93-dated:8-2-1994 | Somwarpet | Shanthalli | Tholur Shettalli | 145 | 0.83 |
| 49 | Kodagu | Madikeri | Somwarpet | FEE-111-FAF-93-dated:13-1-1994 | Somwarpet | Shanthalli | Tholur Shettalli | 135 | 1.52 |
| 50 | Kodagu | Madikeri | Somwarpet | FEE-115-FAF-93-dated:13-1-1994 | Somwarpet | Shanthalli | Tholur Shettalli | 62 | 3.6 |
| 51 | Kodagu | Madikeri | Somwarpet | FEE-111-FA F-93-dt:13-1-1994 | Somwarpet | Shanthalli | Tholur Shettalli | 5/60 | 0.87 |

Details of Section-4 Proposal

| | | | | | | | | | |
|---|---|---|---|---|---|---|---|---|---|
| 52 | Kodagu | Madikeri | Somwarpet | FEE-117-FAF-93-dated:13-1-1994 | Somwarpet | kushalnagar | Hulase | 46 | 0.78 |
| 53 | Kodagu | Madikeri | Somwarpet | FEE-113-FAF-93-dated:13-1-1994 | Somwarpet | kushalnagar | Ramapura | 38 | 1.31 |
| 54 | Kodagu | Madikeri | Somwarpet | FEE-5-FAF-94- dated:21-2-1994 | Somwarpet | kushalnagar | Heggadalli | 13 | 0.78 |
| 55 | Kodagu | Madikeri | Somwarpet | AHFF-316-FAF-91-dated:05-06-1991 | Somwarpet | somwarpet | Hosahalli | 27/1 | 31.92 |
| 56 | Kodagu | Madikeri | Somwarpet | FEE-108-FAF-94 dated 15-1-1994 | Somwarpet | Shanthalli | Jakkanalli | 138/6A | 31.68 |
| | | | | | | Total | | | 1910.504 |
| | | | | | | Division Total | | | 4480.234 |
| **Virajpet Division** | | | | | | | | | |
| 1 | Kodagu | Virajpet | Virajpet | AHFF-228-FAF-91 DT.21.6.91 | Virajpet | Virajpet | Heggala & Arji | 317/1<br>333/1 | 17.28<br>45.12 |
| 2 | | | | AHFF-226-FAF-91 DT.4.6.91/21.6.91 | Virajpet | Virajpet | Maggula | 301/24 | 18.24 |
| 3 | | | | AHFF-202-FAF-91 DT.7.6.91/26.6.91 | Virajpet | Ponnampet | Kongana | 161<br>162 | 3.23<br>63.97 |
| 4 | | | | AHFF-210-FAF-91 DT.13/20.6.91 | Virajpet | Ammatti | Hoskote & Hosur | 1/1<br>146 | 8.64<br>12.48 |
| 5 | | | | AHFF-205-FAF-91 DT.22.6.91/12.7.91 | Virajpet | Virajpet | Heggala | 213/1 | 158 |
| 6 | | | | AHFF-215-FAF-91 DT.13.6.91/25.6.91 | Virajpet | Ammatti | Bilagunda | 250/1 | 6.72 |
| 7 | | | | AHFF-154-FAF-91 DT.27.6.91/6.8.91 | Virajpet | Hudikeri | Hysodluru | 1/1 | 93.11 |
| 8 | | | | FEE 4 FAF 95 DT. 1/3/1995 | Virajpet | Virajpet | Konangeri | 90/1 | 18.18 |
| 9 | | | | FEE 9 FAF 95 DT. 1/3/1995 | Virajpet | Virajpet | Hudikeri | 100, 101 | 1.30 |
| 10 | | | | FEE 10 FAF 95 DT. 1/3/1995 | Virajpet | Virajpet | Hudikeri | 206/1 | 9.32 |
| 11 | Kodagu | Virajpet | Virajpet | FEE 11 FAF 95 DT. 1/3/1995 | Virajpet | Virajpet | Belluru | 299 | 0.58 |
| 12 | | | | FEE 5 FAF 95 DT. 1/3/1995 | Virajpet | Virajpet | Hudikeri | 286 | 3.74 |

Details of Section-4 Proposal

| | | | | | | | | | |
|---|---|---|---|---|---|---|---|---|---|
| 13 | | | | FEE 12 FAF 95 DT.6/3/1995 | Virajpet | Virajpet | Kottageri | 16/1, 16/2 | 1.30 |
| 14 | Kodagu | Virajpet | | FEE 6 FAF 95 DT.01/3/1995 | Virajpet | Virajpet | Kottageri | 31/3 | 0.15 |
| 15 | | | | FEE 7 FAF 95 DT.01/3/1995 | Virajpet | Virajpet | Kottageri | 65/1 | 2.20 |
| 16 | | | | FEE 8 FAF 95 DT.01/3/1995 | Virajpet | Virajpet | Kanuru | 56 | 1.18 |
| 17 | Kodagu | Virajpet | Srimangala | FEE-51-FAF-93 Dt: 21.03.1994 | Ponnmapet | Hudikeri | Konageri | 49/1 | 2.85 |
| 18 | Kodagu | Virajpet | Mundrote | RDS No 174/477-38 Dt:31.10.1938 | Madikeri | Bhagamandala | Vayakara | 124/2 | 26.30 |
| | | | | | | | | | 493.89 |

Chief Conservator of Forests
Kodagu Circle, Madikeri.

Details of Section-4 Proposal